ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರ ನಿಯಮ 330ರಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ:69ಕ್ಕೆ ಉತ್ತರಿಸುವ ಬಗ್ಗೆ.

ವಿಷಯ:-

ಮೈಸೂರು ಮಹಾರಾಜರು 1931 ರ ಇಸವಿಯಲ್ಲಿ ಕೋಲಾರ ಜಿಲ್ಲೆಯ ಬಹಳಷ್ಟು ಗ್ರಾಮಗಳಲ್ಲಿನ ಸರ್ಕಾರಿ ಜಮೀನುಗಳನ್ನು ಅರಣ್ಯ ಇಲಾಖೆಯ ಹೆಸರಿಗೆ ಒಳಪಟ್ಟಿರುವುದಾಗಿ ಸರ್ಕಾರದಿಂದ ಅಧಿಸೂಚನೆ ಹೊರಡಿಸಿರುವುದು ಸರಿಯಷ್ಟೆ. ಆದರೆ ಕಂದಾಯ ಇಲಾಖೆಯ ದಾಖಲೆಗಳಲ್ಲಿ ಇಂಡೀಕರಣ ಮಾಡದ ಅರಣ್ಯ ಇಲಾಖೆಯ ಅಧಿಕಾರಿಗಳು, 90 ವರ್ಷದ ನಂತರ ಇತ್ತೀಚೆಗೆ ಏಕಾಏಕಿ ಇಂತಹ ಜಮೀನುಗಳಿಗೆ ಬೌಂಡರಿಗಳನ್ನು ಗುರುತಿಸಿ, ಕಲ್ಲುಗಳನ್ನು ನೆಟ್ಟು ಹಾಲಿ ಇರುವ ಜಮೀನಿನ ಮಾಲೀಕರಿಗೆ ನೋಟಿಸ್‌ಗಳನ್ನು ನೀಡಿ ಅರಣ್ಯ ಇಲಾಖೆಗೆ ಸೇರಿರುವ ಈ ಜಮೀನನ್ನು ತೆರವುಗೊಳಿಸುವಂತೆ ಸೂಚಿಸುತ್ತಿದ್ದಾರೆ.

ಆದರೆ 90 ವರ್ಷದ ಹಿಂದೆಯೇ ಅರಣ್ಯ ಇಲಾಖೆಗೆ ಅಧಿಸೂಚಿಸಿರುವ ಜಮೀನುಗಳನ್ನು ಕಂದಾಯ ಇಲಾಖೆಯ ದಾಖಲೆಗಳಲ್ಲಿ ಇಂಡೀಕರಿಸದೇ ಇರುವುದು ಸರ್ಕಾರದ ವೈಫಲ್ಯವಾಗಿರುತ್ತದೆ. ಈಗಾಗಲೇ ರೈತರು ಕಂದಾಯ ಇಲಾಖೆಗೆ ಸೇರಿರುವ ಸರ್ಕಾರಿ ಭೂಮಿಯನ್ನು ನಿಯಮಬದ್ಧವಾಗಿ ಸರ್ಕಾರದಿಂದಲೇ ಮಂಜೂರಾತಿ ಪಡೆದು, ಕಾಲಕಾಲಕ್ಕೆ ಸರ್ಕಾರಕ್ಕೆ ಕಟ್ಟಬೇಕಾಗಿರುವ ತೆರಿಗೆ ಹಣವನ್ನು ಪಾವತಿಸುತ್ತಾ ಬಂದಿರುತ್ತಾರೆ. ಅರಣ್ಯ ಇಲಾಖೆಯ ದಿಢೀರ್ ನಿರ್ಧಾರದಿಂದ ಹಾಲಿ ಜಮೀನಿನ ಅನುಭವ ಮತ್ತು ಒಡೆತನದಲ್ಲಿರುವ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸರ್ಕಾರದಿಂದ ಅನ್ಯಾಯವೆಸಗಲು ಮುಂದಾಗಿರುವ ಈ ನಡೆಯಿಂದ ರೈತರಿಗೆ ಅನ್ಯಾಯವಾಗುತ್ತಿದ್ದು, ಈ ನಿಟ್ಟಿನಲ್ಲಿ ಸರ್ಕಾರ ಈ ಕೂಡಲೇ ರೈತರ ಜಮೀನಿನ ತೆರವು ಕಾರ್ಯವನ್ನು ತಕ್ಷಣ ಸ್ಥಗಿತಗೊಳಿಸಬೇಕಾಗಿರುವುದರಿಂದ ಈ ವಿಷಯವನ್ನು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಲು ಕೋರಿದೆ.

*****

ಉತ್ತರ:-

ಮಾನ್ಯ ವಿಧಾನ ಪರಿಷತ್ ಸದಸ್ಯರು ಪ್ರಸ್ತಾಪಿಸಿರುವಂತೆ ಅಂದಿನ ಘನ ಮೈಸೂರು ಸಂಸ್ಥಾನವು ಮೈಸೂರು ರೆಗ್ಯುಲೇಷನ್ ಆಕ್ಟ್ 1896, ಮೈಸೂರು ಫಾರೆಸ್ಟ್ ರೆಗ್ಯುಲೇಷನ್ ಆಕ್ಟ್ 1900 ರಂತೆ ಕೋಲಾರ ಜಿಲ್ಲೆಯಲ್ಲಿನ ವಿವಿಧ ಅರಣ್ಯ ಪ್ರದೇಶಗಳನ್ನು ಮೀಸಲು ಅರಣ್ಯವೆಂದು ವಿವಿಧ ಆದೇಶಗಳಲ್ಲಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅಲ್ಲದೆ, ಇಂಡಿಯನ್ ಫಾರೆಸ್ಟ್ ಆಕ್ಟ್ 1921 ಮತ್ತು ಕರ್ನಾಟಕ ಅರಣ್ಯ ಕಾಯ್ದೆ 1963 ರಲ್ಲಿನ ನಿಯಮಗಳಡಿ ಅರಣ್ಯ ಪ್ರದೇಶಗಳನ್ನು "ಮೀಸಲು ಅರಣ್ಯ"ಗಳೆಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚಿತ ಅರಣ್ಯ ಪ್ರದೇಶಗಳನ್ನು ಕಂದಾಯ ದಾಖಲೆಗಳಲ್ಲಿ "ಅರಣ್ಯ" ಎಂದು ಕಂದಾಯ ಇಲಾಖೆ ಇಂಡೀಕರಿಸುತ್ತದೆ. ಇಂಡೀಕರಣ ಪ್ರಕ್ರಿಯೆಯು ನಿರಂತರವಾಗಿದ್ದು, ಈ ಹಿಂದೆ ಕಂದಾಯ ದಾಖಲೆಗಳಲ್ಲಿ 79% ಅರಣ್ಯ ಪ್ರದೇಶವನ್ನು ಇಂಡೀಕರಣ ಮಾಡಲಾಗಿದ್ದು, ಇತ್ತೀಚಿನ ವರ್ಷಗಳಲ್ಲಿ 6% ಇಂಡೀಕರಣ ಮಾಡಿದ್ದು, ಪ್ರಸ್ತುತ 85% ಅರಣ್ಯ ಪ್ರದೇಶವನ್ನು ಕಂದಾಯ ದಾಖಲೆಗಳಲ್ಲಿ ಇಂಡೀಕರಿಸಲಾಗಿದೆ. ಕೆಲವು ಪ್ರಕರಣಗಳಲ್ಲಿ ಹಲವು ಆಡಳಿತಾತ್ಮಕ ಕಾರಣಗಳಿಂದ ಇಂಡೀಕರಣ ಪ್ರಕ್ರಿಯೆ ಬಾಕಿಯಿರುತ್ತದೆ. ಈ ಪ್ರದೇಶವನ್ನು ಇಂಡೀಕರಿಸಲು ಸೂಕ್ತ ದಾಖಲೆಗಳೊಂದಿಗೆ ಕಂದಾಯ ಇಲಾಖೆಯೊಂದಿಗೆ ನಿರಂತರ ಪತ್ರ ವ್ಯವಹರಿಸಿ



Generated from eOffice by DR. SANJAY S BIJJUR, FEE-PRS(S B), PRINCIPAL SECRETARY, FOREST DEPARTMENT SEC on 06/12/2023 04:37 PM

ಇಂಡೀಕರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅಧಿಸೂಚಿತ ಅರಣ್ಯ ಪ್ರದೇಶಗಳನ್ನು ಇಲಾಖೆಯ ಕಾರ್ಯಯೋಜನಾ ವಿಭಾಗದಿಂದ ಪ್ರತಿ 10 ವರ್ಷಗಳಿಗೊಮ್ಮೆ ಮೋಜಣಿ ಮಾಡಿ ಗಡಿ ಗುರ್ತಿಸಿ ಗಡಿ ಕಲ್ಲುಗಳನ್ನು ನೆಡಲಾಗುತ್ತದೆ. ಮೋಜಣಿ ಸಮಯದಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡಿರುವ ಪ್ರದೇಶಗಳನ್ನು ಗುರುತಿಸಿ ನಕ್ಷೆಯನ್ನು ತಯಾರಿಸಲಾಗುತ್ತದೆ. ಅಂತಹ ಅನಧಿಕೃತ ಒತ್ತುವರಿಗಳನ್ನು ಕಾಲಕಾಲಕ್ಕೆ ನಿಯಮಾನುಸಾರ ತೆರವುಗೊಳಿಸಿ ಅರಣ್ಯ ಸಂರಕ್ಷಣೆ ಮಾಡುವುದು ಅರಣ್ಯ ಇಲಾಖೆಯ ಆದ್ಯ ಕರ್ತವ್ಯವಾಗಿರುತ್ತದೆ. ಈ ಕುರಿತು ಕರ್ನಾಟಕ ಅರಣ್ಯ ಕಾಯ್ದೆಯಂತೆ ಒತ್ತುವರಿದಾರರಿಗೆ ಹಲವು ಬಾರಿ ನೋಟಿಸ್ ಜಾರಿಗೊಳಿಸಿ ಅರಣ್ಯ ಅಪರಾಧ ಪ್ರಕರಣಗಳನ್ನು ದಾಖಲಿಸಿ ಕರ್ನಾಟಕ ಅರಣ್ಯ ಕಾಯ್ದೆ 1963 ರ ಕಲಂ 64 (ಎ) ಪ್ರಕಾರ ವಿಧಿವಿಧಾನ ಜರುಗಿಸಿ ನಿಯಮಾನುಸಾರ ಅನಧಿಕೃತ ಒತ್ತುವರಿ ಮಾತ್ರ ತೆರವು ಮಾಡಲಾಗುತ್ತದೆ. ಅರಣ್ಯ ಇಲಾಖೆಯಿಂದ ಇತ್ತೀಚೆಗೆ ಏಕಾಏಕಿ ನೋಟಿಸ್‌ಗಳನ್ನು ನೀಡಿ ಅರಣ್ಯ ಇಲಾಖೆಗೆ ಸೇರಿರುವ ಜಮೀನನ್ನು ತೆರವುಗೊಳಿಸಲು ಸೂಚಿಸಿರುವುದಿಲ್ಲ.

ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯ ರಿಟ್ ಅರ್ಜಿ (ಸಿವಿಲ್) 202/1995**ಟಿ.ಎನ್ ಗೋದಾವರ್ಮನ್ ತಿರುಮಲಪಾಡ್ ವಿರುದ್ಧ ಭಾರತ ಸರ್ಕಾರ ಮತ್ತು ಇತರರು** ಪ್ರಕರಣದಲ್ಲಿ ದಿನಾಂಕ 12-12-1996 ರಲ್ಲಿ ಅರಣ್ಯ ಪ್ರದೇಶಗಳಲ್ಲಿನ ಅನಧಿಕೃತ ಒತ್ತುವರಿಯನ್ನು ತೆರವುಗೊಳಿಸಲು ಆದೇಶ ಹೊರಡಿಸಲಾಗಿದೆ.

ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಿಸಿದ **ರಿಟ್ ಅರ್ಜಿ ಸಂಖ್ಯೆ: 15511-14/2013 (ಜಿಎಂ-ಆರ್‌ಇಎಸ್-ಪಿಐಎಲ್) ಸಮಾಜ ಪರಿವರ್ತನಾ ಸಮುದಾಯ ಮತ್ತು ಇತರರು ವಿರುದ್ಧ ಕರ್ನಾಟಕ ಸರ್ಕಾರ ಮತ್ತು ಇತರರು** ಪ್ರಕರಣದಲ್ಲಿ ದಾಖಲಿಸಿರುವ ಅಫಿಡವಿಟ್‌ನಂತೆ ಒತ್ತುವರಿಗಳನ್ನು ತೆರವುಗೊಳಿಸಿ ಕಾಲಕಾಲಕ್ಕೆ ಮಾಹಿತಿ ಸಲ್ಲಿಸಲು ಮಾನ್ಯ ನ್ಯಾಯಾಲಯವು (Continuous mandamus) ಆದೇಶಿಸಿರುತ್ತದೆ. ಅದರಂತೆ ಅನಧಿಕೃತ ಒತ್ತುವರಿ ತೆರವುಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಮಾಹಿತಿ ಒದಗಿಸಬೇಕಾಗಿದೆ.

**ರೈತರಿಗೆ ಕಂದಾಯ ಇಲಾಖೆಯಿಂದ ಮಂಜೂರಾದ ಕಂದಾಯ ಭೂಮಿಯನ್ನು ತೆರವುಗೊಳಿಸುವ ಕಾರ್ಯವನ್ನು ಅರಣ್ಯ ಇಲಾಖೆಯು ಕೈಗೊಂಡಿರುವುದಿಲ್ಲ.** ಕೋಲಾರ ವಿಭಾಗದಲ್ಲಿ ಅಧಿಸೂಚಿತ ಅರಣ್ಯ ಪ್ರದೇಶದಲ್ಲಿ ಸುಮಾರು 40 ರಿಂದ 50 ಎಕರೆ ಅರಣ್ಯ ಪ್ರದೇಶವನ್ನು ಅನಧಿಕೃತ ಮಂಜೂರಾತಿ, ನಕಲಿ ದಾಖಲೆಗಳನ್ನು ಸೃಷ್ಟಿಸಿ ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡಿರುವುದು ಕಂಡುಬಂದಿರುತ್ತದೆ.

ಮುಂದುವರೆದು, ಕೋಲಾರ ವಿಭಾಗದ ಶ್ರೀನಿವಾಸಪುರ ವಲಯ ವ್ಯಾಪ್ತಿಯಲ್ಲಿ ಒತ್ತುವರಿದಾರರು ಹಲವು ನಕಲಿ ದಾಖಲೆಗಳನ್ನು ಸೃಜಿಸಿ ಅರಣ್ಯ ಪ್ರದೇಶಗಳನ್ನು ಮಂಜೂರು ಮಾಡಿದ ಕುರಿತು ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಸಹಾಯಕ ಕಮೀಷನರ್, ಕೋಲಾರ ವಿಭಾಗ, ಕೋಲಾರ ರವರು ಕಂದಾಯ ಅಧಿಕಾರಿಗಳು ಮತ್ತು ಒತ್ತುವರಿದಾರರ ವಿರುದ್ಧ ಆರಕ್ಷಕ ವೃತ್ತ ನಿರೀಕ್ಷಕರು, ಶ್ರೀನಿವಾಸಪುರ ಇವರಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. (ಶ್ರೀನಿವಾಸಪುರ ಆರಕ್ಷಕ ಠಾಣೆ ಎಫ್‌ಐಆರ್ ನಂ. 0159 ದಿನಾಂಕ 25-6-2008)



Generated from eOffice by DR. SANJAY S BIJJUR, FEE-PRS(S B), PRINCIPAL SECRETARY, FOREST DEPARTMENT SEC on 06/12/2023 04:37 PM

ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾದ ಶ್ರೀ ಎಲ್. ಎಸ್ ನಿರ್ವಾಣೆ ಗೌಡ ಮತ್ತು ಇತರರು ಪ್ರಕರಣದಲ್ಲಿ ಅರಣ್ಯ ಪ್ರದೇಶಗಳಲ್ಲಿ ಸಾಗುವಳಿ ಚೀಟಿ ನೀಡುವುದು / ಮಂಜೂರಾತಿ ನೀಡಲು ಬರುವುದಿಲ್ಲ ಎಂದು ಆದೇಶಿಸಿದೆ. ಆದೇಶದ ಉದ್ಧೃತ ಭಾಗ ಈ ಮುಂದಿನಂತಿದೆ. The Hon'ble Supreme Court in the case **of State of Karnataka and Others vs I. S Nirvane Gowda and others reported in (2007) 15 SCC 744** has held that *"once the land has been declared as State Forest, any acts of Revenue Department in granting or issuing Saguvali Chit is of consequence and has no significance."*

ಅರಣ್ಯ ಪ್ರದೇಶವನ್ನು ಅನಧಿಕೃತವಾಗಿ ಒತ್ತುವರಿ ಮಾಡಿ ಸಾಗುವಳಿ ಮಾಡುತ್ತಿರುವವರ ವಿರುದ್ಧ ಅರಣ್ಯ ಅಪರಾಧ ಪ್ರಕರಣಗಳನ್ನು ದಾಖಲಿಸಿ ಕಾನೂನಿನ್ವಯ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್-64 ಎ ಪ್ರಕಾರ ವಿಧಿ ವಿಧಾನ ಜರುಗಿಸಿ ಒತ್ತುವರಿದಾರರನ್ನು ತೆರವುಗೊಳಿಸಲು ಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೋಲಾರ ವಿಭಾಗ/ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಆದೇಶ ಹೊರಡಿಸಲಾಗಿದೆ. ಈ ಆದೇಶದ ವಿರುದ್ಧ ಆರೋಪಿತರು ಪ್ರಕರಣಗಳನ್ನು ವಿವಿಧ ನ್ಯಾಯಾಲಯಗಳಲ್ಲಿ ಹಾಗೂ ಸೆಕ್ಷನ್ 64 ಎ ರಡಿಯಲ್ಲಿ ಮೇಲ್ಮನವಿಗಳನ್ನು ಸಲ್ಲಿಸಿರುತ್ತಾರೆ. ಈ ಪ್ರಕರಣಗಳು ಇತ್ಯರ್ಥಗೊಂಡಿದ್ದು, ಇಲಾಖಾ ಪರವಾಗಿ ಆದೇಶವಾಗಿರುತ್ತದೆ. ಒತ್ತುವರಿದಾರರು ಮಾನ್ಯ ಉಚ್ಛ ನ್ಯಾಯಾಲಯ ಹಾಗೂ ವ್ಯಾಪ್ತಿಯ ಕೆಳನ್ಯಾಯಾಲಯಗಳಲ್ಲಿ ಹೂಡಿದ ದಾವೆಗಳ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ಇಲಾಖೆ ಪರವಾಗಿ ತೀರ್ಪು ನೀಡಿ ಪ್ರಕರಣಗಳನ್ನು ಇತ್ಯರ್ಥಪಡಿಸಿ ಒತ್ತುವರಿ ತೆರವುಗೊಳಿಸಲು ಆದೇಶ ನೀಡಿರುತ್ತದೆ. ಈ ಆದೇಶಗಳನ್ವಯ ಕೋಲಾರ ವಿಭಾಗದ ಅರಣ್ಯ ಪ್ರದೇಶಗಳಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡಿದ್ದ ಒತ್ತುವರಿದಾರರನ್ನು ತೆರವುಗೊಳಿಸಲು ನಿಯಮಾನುಸಾರ ಕ್ರಮ ವಹಿಸಲಾಗುತ್ತಿದೆ. ಯಾವುದೇ ರೈತರನ್ನು ಏಕಾಏಕಿ ತಮ್ಮ ಒಡೆತನದ ಜಮೀನಿನಿಂದ ತೆರವುಗೊಳಿಸುವ ಕಾರ್ಯವನ್ನು ಅರಣ್ಯ ಇಲಾಖೆಯಿಂದ ಕೈಗೊಂಡಿರುವುದಿಲ್ಲ.

**ಸಂಖ್ಯೆ: ಎಫ್‌ಇಇ 84 ಎಫ್‌ಜಿಎಲ್ 2023**

Bkhandre

**(ಈಶ್ವರ ಬಿ ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು



Generated from eOffice by DR. SANJAY S BIJJUR, FEE-PRS(S B), PRINCIPAL SECRETARY, FOREST DEPARTMENT SEC on 06/12/2023 04:37 PM